೧೫ ಸುಳ್ಯ ವಿಧಾನಸಭಾ ಕ್ಷೇತ್ರದ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸದೇ ಇರುವುದು

ಶ್ರೀ ಕಂಶಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಬರುವ (೧) ಸರಕಾರಿ ಪದವೀಪೂರ್ವ ಕಾಲೇಜು, ಬೆಳ್ಳಾರೆ, ಇಲ್ಲಿ ಒಂದು ಆಂಗ್ಲ ಉನ್ನತ್ಯಾಸಕರ ಹುದ್ದೆ, ಒಂದು ಬಯಾಲಜಿ ಉಪನ್ಯಾಸಕರ ಹುದ್ದೆ, ಒಂದು ವೃತ್ತಿ ಶಿಕ್ಷಕರ ಹುದ್ದೆ. ಒಂದು ಕಾಮರ್ಸ್ ಮತ್ತು ಅಕೌಂಟಿನ್ಸಿ ಉಪನ್ಯಾಸಕರ ಹುದ್ದೆ (೨) ಸರಕಾರಿ ಪದವಿಪೂರ್ವ ಕಾಲೇಜು, ಕಾಣಿಯೂರು, ಇಲ್ಲಿ ಕಾಮರ್ಸ್ ಮತ್ತು ಅಕೌಂಟಿನ್ಸಿ, ಉಪನ್ಯಾಸಕರ ಹುದ್ದೆ–೧ ದೈಹಿಕ ಶಿಕ್ಷಕರ ಹುದ್ದೆ–೧ (೩) ಸರಕಾರಿ ಪದವಿ ಪೂರ್ವ ಕಾಲೇಜು, ಪಂಜ, ಇಲ್ಲಿ ಆಂಗ್ಲ ಉಪನ್ಯಾಸಕರ ಹುದ್ದೆ–೧, ಹಿಂದಿ ಶಿಕ್ಷಕರ ಹುದ್ದೆ–೧, (೪) ಸರಕಾರಿ ಪದವಿಪೂರ್ವ ಕಾಲೇಜು, ಸುಳ್ಯ ಇಲ್ಲಿ ಆಂಗ್ಲ ಉಪನ್ಯಾಸಕರ ಹುದ್ದೆ–೧ (೫) ಸರಕಾರಿ ಪ್ರೌಢಶಾಲೆ ಕಡಬ, ಇಲ್ಲಿ ಮಂಜೂರಾಪಾಧ್ಯಾಯರ ಹುದ್ದೆ–೧ ವಿಜ್ಞಾನ ವಿಭಾಗದ ಅಧ್ಯಾಪಕರ ಹುದ್ದೆ ೧.

ಈ ಮೇಲಿನ ಹುದ್ದೆಗಳು ಸದರಿ ಶಾಲಾ ಕಾಲೇಜುಗಳಲ್ಲಿ ಸತತವಾಗಿ ೩ ವರ್ಷಗಳಿಂದ ಖಾಲಿ ಬಿದ್ದಿರುವುದು ಮಾತ್ರವಲ್ಲ, ಸದರಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಸರಕಾರವನ್ನು, ಇಲಾಖೆಯನ್ನು ಅಧಿವೇಶನದಲ್ಲಿ ಪ್ರಶ್ನಾವಳಿ ಮೂಲಕ ಲಿಖಿತ ಮೂಲಕವಾಗಿ ಸತತವಾಗಿ ೩ ವರ್ಷಗಳಿಂದ ಕೇಳಿ ಕೊಂಡರೂ, ಸದನದಲ್ಲಿ ಸತತವಾಗಿ ೩ ವರ್ಷಗಳಿಂದ ಕ್ರಮ ಕೈಕೊಳ್ಳುವ ಭರವಸೆ ಮಾತ್ರ ಕೊಟ್ಟಿದ್ದಲ್ಲದೆ, ಈತನಕ ಈ ಮೇಲೆ ವಿವರಿಸಿದ ಒಂದು ಹುದ್ದೆಯನ್ನೂ ಭರ್ತಿ ಮಾಡಲು ಸಾಧ್ಯವಾಗಿಲ್ಲ ಈ ಕುರಿತು ಸರಕಾರ ತಳೆದ ನಿಲುವು ಏನು ? ಈ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರ ಏನು ಕ್ರಮ ಕೈಗೊಳ್ಳುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ವಿದ್ಯಾಮಂತ್ರಿಗಳು ಆ ಸದನದಲ್ಲಿದ್ದಾರೆ, ವರದಿಯನ್ನು ತರಿಸಿಕೊಡುತ್ತೇವೆ.

೧೬ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಯಾಂತ್ರಿಕ ವಿಭಾಗದ ಉಪನ್ಯಾಸಕರ ಹುದ್ದೆಯನ್ನು ಭರ್ತಿ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸದೇ ಇರುವುದು.

ಶ್ರೀ ಕೆ. ಲಕ್ಕಪ್ಪ (ಶ್ರೀ ಜಿ. ಎಸ್. ಶಿವನಂಜಪ್ಪನವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಯಾಂತ್ರಿಕ ವಿಭಾಗದಲ್ಲಿ ಉಪನ್ಯಾಸಕರ ಹುದ್ದೆಯನ್ನು ಭರ್ತಿ ಮಾಡುವ ಪ್ರಯತ್ನದ ಪ್ರಕಟಣೆಯಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸದೇ ಮತ್ತು ಆದಂರತೆ ಪ್ರಕಟಣೆ ಮಾಡದೇ ಮೊದಲನೇ ದರ್ಜೆ ಬಿ.ಇ ಮತ್ತು ಎಂ. ಇ. ಪದವಿ ಮತ್ತು ಅನುಭವಗಳಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಪ್ರಕಟಿಸಿರುತ್ತಾರೆ. ಆದರೆ ಮೊದಲನೇ ದರ್ಜೆ ಬಿ. ಇ, ಪದವಿ, ಎಂ. ಇ ಪದವಿ ಹಾಗೂ ಅನುಭವವಿರುವವರನ್ನು ಬಿಟ್ಟು ಎರಡನೇ ದರ್ಜೆ ಬಿ ಇ. ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದು ಕಾನೂನಿಗೆ ಹಾಗೂ ಪ್ರಕಟಣೆಗೆ ವಿರುದ್ಧವಾಗಿರುತ್ತದೆ.

ಮೊದಲನೇ ದರ್ಜೆಯಲ್ಲಿ ಉತ್ತೀರ್ಣರಾಗಿದ್ದವರನ್ನು ಮಾತ್ರ ಅರ್ಜಿ ಹಾಕಲು ಕರೆದಿದ್ದರೂ ಎರಡನೇದರ್ಜೆಯಲ್ಲಿ ತೇರ್ಗಡೆಯಾದವರ ಅರ್ಜಿಗಳನ್ನು ತೆಗೆದುಕೊಂಡು ಮೊದಲನೇ ದರ್ಜೆ ಎಂ.ಇ. ಪಾಸ್ ಮಾಡಿದವರನ್ನು ಹಾಗೂ ಅನುಭವ ಉಳ್ಳವರನ್ನು ಕಡೆಗಣಿಸಿ ಎರಡನೇದರ್ಜೆಯಲ್ಲಿ ಬಿ.ಇ.ಪದವಿ ತೇರ್ಗಡೆಯಾದವರನ್ನು ಆಯ್ಕೆ ಮಾಡಿರುವುದು ಆಶ್ಚರ್ಯಕರವಾಗಿದೆ. ಈ ಸಂಬಂಧದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದವರು ಯು. ಜಿ ಸಿ ಯ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ. ಮತ್ತು ಇದೇ ಯಾಂತ್ರಿಕ ವಿಭಾಗದಲ್ಲಿ ಸುಮಾರು ೧೫–೧೬ ವರ್ಷಗಳ ಅನುಭವವಿದ್ದು ಎಂ. ಬಿ ಪದವಿಯಲ್ಲಿ ವ್ಯಾಸಂಗ ಮಾಡಿದವರನ್ನೂ ಕಡೆಗಣಿಸಿ ಕೇವಲ ಎರಡನೇದರ್ಜೆಯಲ್ಲಿ ಬಿ. ಇ. ಪಾಸಾಗಿದ್ದವರನ್ನು ನೇಮಿಸಿರುತ್ತಾರೆ.